Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( EXTRAORDINARY )
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं. १ नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |

**Ministry of Law and Justice**
Legislative Department
New Delhi, 04th June, 2020

ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯೀ ಇಲಾಖೆ
ನವದೆಹಲಿ, 04ನೇ ಜೂನ್ 2020

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1996

## (1996ರ ಅಧಿನಿಯಮ ಸಂಖ್ಯೆ 28)

[19ನೇ ಆಗಸ್ಟ್, 1996]

ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996 ರ ಮೇರೆಗೆ ರಚನೆಯಾಗಿರುವ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಗಳ ಸಂಪನ್ಮೂಲಗಳನ್ನು ಸಂವರ್ಧಿಸುವ ಸಲುವಾಗಿ, ನಿಯೋಜಕರು ವಹಿಸಿದ ನಿರ್ಮಾಣ ವೆಚ್ಚದ ಮೇಲೆ ಉಪಕರ ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1995ನೇ ನವೆಂಬರ್ 3ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಳಿ" ಎಂದರೆ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996ರ 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿ;

(ಎಎ) "ನಿಯೋಜಕ" ಪದಕ್ಕೆ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996ರ 2ನೆಯ ಪ್ರಕರಣ (1)ನೇ ಉಪಪ್ರಕರಣದ (i) ಖಂಡದಲ್ಲಿ ಕೊಟ್ಟಿರುವ ಅರ್ಥವೇ ಇರತಕ್ಕದ್ದು;

(ಬಿ) "ನಿಧಿ" ಎಂದರೆ ಮಂಡಳಿಯು ಸ್ಥಾಪಿಸಿದ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ನಿಧಿ;

(ಸಿ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದದು;

(ಡಿ) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಮತ್ತು ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥವನ್ನೇ ಈ ಅಧಿನಿಯಮದಲ್ಲೂ ಹೊಂದಿರತಕ್ಕದ್ದು.

**3. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.**- (1) ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ಉದ್ಯೋಗ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996ರ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ ನಿಯೋಜಕನು ವಹಿಸಿದ ಕಟ್ಟಡ ನಿರ್ಮಾಣ ವೆಚ್ಚದ ಶೇಕಡಾ ಎರಡಕ್ಕೆ ಮೀರದ ಆದರೆ ಶೇಕಡ ಒಂದಕ್ಕಿಂತ ಕಡಿಮೆ ಇಲ್ಲದ ದರದಲ್ಲಿ ಉಪಕರವನ್ನು ವಿಧಿಸತಕ್ಕದ್ದು ಹಾಗೂ ಸಂಗ್ರಹಿಸತಕ್ಕದ್ದು.

(2) ಸರ್ಕಾರದ ಅಥವಾ ಸಾರ್ವಜನಿಕ ವಲಯ ಉದ್ಯಮದ ಕಟ್ಟಡ ಅಥವಾ ಇತರ ನಿರ್ಮಾಣ ಕಾಮಗಾರಿಯ ಸಂಬಂಧದಲ್ಲಿ ಮೂಲದಲ್ಲೇ ಮಾಡಬೇಕಾದ ಕಡಿತ ಅಥವಾ ಅಂಥ ಕಟ್ಟಡಕ್ಕೆ ಅಥವಾ ಇತರ ನಿರ್ಮಾಣ ಕಾಮಗಾರಿಗೆ ಅಂಥ ಸ್ಥಳೀಯ ಪ್ರಾಧಿಕಾರದ ಅನುಮೋದನೆ ಅಗತ್ಯವಾಗಿರುವಲ್ಲಿ ಆ ಸ್ಥಳೀಯ ಪ್ರಾಧಿಕಾರದ ಮೂಲಕ ಮಾಡಬೇಕಾದ ಮುಂಗಡ ವಸೂಲಿಯೂ ಸೇರಿದಂತೆ, (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಿದ ಉಪಕರವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿಯೊಬ್ಬ ನಿಯೋಜಕನಿಂದಲೂ ಸಂಗ್ರಹಿಸತಕ್ಕದ್ದು.

(3) ಉಪ-ಪ್ರಕರಣ (2)ರ ಮೇರೆಗೆ ಸಂಗ್ರಹಿಸಿದ ಉಪಕರದ ಹಣವನ್ನು, ಉಪಕರವನ್ನು ಸಂಗ್ರಹಿಸುವ ಸ್ಥಳೀಯ ಪ್ರಾಧಿಕಾರವು ಅಥವಾ ರಾಜ್ಯ ಸರ್ಕಾರವು ಸಂಗ್ರಹಿಸಿದ ಉಪಕರದ ಶೇಕಡಾ ಒಂದಕ್ಕಿಂತ ಹೆಚ್ಚಾಗದಂತೆ, ಅಂಥ ಉಪಕರದ ಸಂಗ್ರಹಣೆ ವೆಚ್ಚವನ್ನು ಕಳೆದುಕೊಂಡ ನಂತರ ಮಂಡಳಿಗೆ ಸಂದಾಯ ಮಾಡತಕ್ಕದ್ದು.

(4) ಉಪ-ಪ್ರಕರಣ (1)ರಲ್ಲಿ ಅಥವಾ ಉಪ-ಪ್ರಕರಣ (2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ವಿಧಿಸತಕ್ಕ ಉಪಕರವನ್ನು, ಮುಂಚಿತವಾಗಿಯೇ ವಿಧಿಸುವುದು ಒಳಗೊಂಡಂತೆ, ಮಾಡತಕ್ಕ ಅಂತಿಮ ಕರ ನಿರ್ಧರಣೆಗೆ ಒಳಪಟ್ಟು, ಸಂಬಂಧಿಸಿದ ಕಟ್ಟಡದ ಅಥವಾ ಇತರ ನಿರ್ಮಾಣ ಕಾಮಗಾರಿಯ ಪ್ರಮಾಣದ ಆಧಾರದ ಮೇಲೆ ನಿಯಮಿಸಬಹುದಾದಂಥ ಏಕರೂಪದ ದರದಲ್ಲಿ ಅಥವಾ ದರಗಳಲ್ಲಿ ಸಂಗ್ರಹಿಸಬಹುದು.

**4. ವಿವರಣ ಪಟ್ಟಿಕೆಗಳನ್ನು ಸಲ್ಲಿಸುವುದು.**- (1) ಪ್ರತಿಯೊಬ್ಬ ನಿಯೋಜಕನು, ನಿಯಮಿಸಬಹುದಾದಂತಹ ವಿವರ ಪಟ್ಟಿಕೆಗಳನ್ನು ಅಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಂಥ ರೀತಿಯಲ್ಲಿ ಅಂಥ ಕಾಲದಲ್ಲಿ ಸಲ್ಲಿಸತಕ್ಕದ್ದು.

(2) ಕಟ್ಟಡ ನಿರ್ಮಾಣ ಅಥವಾ ಇತರ ನಿರ್ಮಾಣ ಕಾಮಗಾರಿಯನ್ನು ನಡೆಸುತ್ತಿರುವ, 3ನೇ ಪ್ರಕರಣದ ಮೇರೆಗೆ ಉಪಕರ ಸಂದಾಯ ಮಾಡಲು ಬದ್ಧನಾಗಿರುವ ಯಾರೇ ವ್ಯಕ್ತಿಯು, 3(1)ನೇ ಪ್ರಕರಣದ ಉಪ-ಪ್ರಕರಣದ ಮೇರೆಗೆ ಯಾವುದೇ ವಿವರ ಪಟ್ಟಿಕೆಗಳನ್ನು ಸಲ್ಲಿಸಲು ವಿಫಲನಾದರೆ, ಅಧಿಕಾರಿಯು ಅಥವಾ ಪ್ರಾಧಿಕಾರವು ಅಂಥ ವ್ಯಕ್ತಿಗೆ ನೋಟೀಸನ್ನು ನೀಡಿ, ಅಂಥ

ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕಕ್ಕೆ ಮುಂಚೆ ಅಂಥ ವಿವರಣ ಪಟ್ಟಿಕೆಗಳನ್ನು ಸಲ್ಲಿಸುವಂತೆ ಅವನನ್ನು ಅಗತ್ಯಪಡಿಸತಕ್ಕದ್ದು.

5. **ಉಪಕರದ ನಿರ್ಧರಣೆ.**– (1) ಪ್ರಕರಣ 4ರ ಮೇರೆಗೆ ವಿವರ ಪಟ್ಟಿಕೆಯನ್ನು ಯಾವ ಅಧಿಕಾರಿಗೆ ಅಥವಾ ಯಾವ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆಯೋ ಆ ಅಧಿಕಾರಿಯು ಅಥವಾ ಪ್ರಾಧಿಕಾರವು ತಾನು ಅಥವಾ ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ತರುವಾಯ ಮತ್ತು ವಿವರಪಟ್ಟಿಕೆಯಲ್ಲಿ ತಿಳಿಸಿರುವ ವಿವರಗಳು ಸರಿಯಾಗಿವೆ ಎಂದು ಅವನು ಅಥವಾ ಅದು ಮನವರಿಕೆ ಮಾಡಿಕೊಂಡ ನಂತರ ನಿಯೋಜಕನು ಸಂದಾಯ ಮಾಡಬೇಕಾದ ಉಪಕರದ ಮೊಬಲಗನ್ನು ಆದೇಶದ ಮೂಲಕ ನಿರ್ಧರಣೆ ಮಾಡತಕ್ಕದ್ದು.

(2) ಪ್ರಕರಣ 4ರ ಉಪ–ಪ್ರಕರಣ (2)ರ ಮೇರೆಗೆ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ವಿವರಣ ಪಟ್ಟಿಕೆಯನ್ನು ಸಲ್ಲಿಸದಿದ್ದರೆ, ಅವನು ಅಥವಾ ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ತರುವಾಯ, ನಿಯೋಜಕನು ಸಂದಾಯ ಮಾಡಬೇಕಾದ ಉಪಕರದ ಮೊಬಲಗನ್ನು ಆದೇಶದ ಮೂಲಕ ನಿರ್ಧರಣೆ ಮಾಡತಕ್ಕದ್ದು.

(3) ಉಪ–ಪ್ರಕರಣ (1)ರ ಅಥವಾ ಉಪ–ಪ್ರಕರಣ (2)ರ ಮೇರೆಗೆ ಮಾಡಿದ ಉಪಕರದ ನಿರ್ಧರಣೆಯ ಆದೇಶದಲ್ಲಿ ನಿಯೋಜಕನು ಯಾವ ದಿನಾಂಕದೊಳಗೆ ಉಪಕರವನ್ನು ಸಂದಾಯ ಮಾಡಬೇಕೋ ಆ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು.

6. **ವಿನಾಯಿತಿ ನೀಡಲು ಅಧಿಕಾರ.**– ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಉಪಕರವನ್ನು ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುವೇ ಸಂವಾದಿ ಕಾನೂನಿನ ಮೇರೆಗೆ ಈಗಾಗಲೇ ವಿಧಿಸಿರುವಲ್ಲಿ ಮತ್ತು ಸಂದಾಯ ಮಾಡಿರುವಲ್ಲಿ ಅಂಥ ಉಪಕರವನ್ನು ಸಂದಾಯ ಮಾಡದಂತೆ ರಾಜ್ಯದಲ್ಲಿನ ಯಾರೇ ನಿಯೋಜಕನಿಗೆ ಅಥವಾ ನಿಯೋಜಕರ ವರ್ಗಕ್ಕೆ ವಿನಾಯಿತಿ ನೀಡಬಹುದು.

7. **ಪ್ರವೇಶಿಸಲು ಅಧಿಕಾರ.**– ರಾಜ್ಯ ಸರ್ಕಾರದಿಂದ ಈ ಬಗ್ಗೆ ವಿಶೇಷವಾಗಿ ಅಧಿಕಾರ ಪಡೆದಿರುವ ಆ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು ಅಥವಾ ಯಾವುದೇ ಪ್ರಾಧಿಕಾರವು,–

(ಎ) 4ನೇ ಪ್ರಕರಣದ ಮೇರೆಗೆ ಯಾರೇ ನಿಯೋಜಕನು ಒದಗಿಸಿರುವ ಯಾವುದೇ ವಿವರಗಳ ಸರಿತನವನ್ನು ಪರಿಶೀಲಿಸುವುದು ಸೇರಿದಂತೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಯಾವ ಸ್ಥಳವನ್ನು ಪ್ರವೇಶಿಸುವುದು ಅವಶ್ಯವೆಂದು ಅವನು ಪರಿಗಣಿಸುತ್ತಾನೋ ಅಥವಾ ಅದು ಪರಿಗಣಿಸುತ್ತದೋ ಆ ಯಾವುದೇ ಸ್ಥಳಕ್ಕೆ ಯಾವುದೇ ಯುಕ್ತ ಸಮಯದಲ್ಲಿ ಅವನು ಅಥವಾ ಅದು ಸೂಕ್ತವೆಂದು ಭಾವಿಸುವಂಥ ಯಾವುದಾದರೂ ಸಹಾಯವನ್ನು ಪಡೆಯುವುದಿದ್ದರೆ ಅಂಥ ಸಹಾಯ ಪಡೆದು ಪ್ರವೇಶಿಸಬಹುದು.

(ಬಿ) ಈ ಅಧಿನಿಯಮದ ಮೇರೆಗೆ ಅವನ ಅಥವಾ ಅದರ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವ ಸಲುವಾಗಿ ಅವಶ್ಯವಾದ ಯಾವುದೇ ಕಾರ್ಯವನ್ನು ಅಂಥ ಸ್ಥಳದೊಳಗೆ ಮಾಡಬಹುದು.

(ಸಿ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

8. **ಉಪಕರವನ್ನು ಸಂದಾಯ ಮಾಡಲು ವಿಳಂಬ ಮಾಡಿದ್ದಕ್ಕೆ ಸಂದಾಯ ಮಾಡಬೇಕಾದ ಬಡ್ಡಿ.**– ಯಾರೇ ನಿಯೋಜಕನು, 3ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಉಪಕರದ ಯಾವುದೇ ಮೊಬಲಗನ್ನು ಉಪಕರ ನಿರ್ಧರಣಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಸಂದಾಯ ಮಾಡಲು ತಪ್ಪಿದರೆ, ಅಂಥ ನಿಯೋಜಕನು ಅಂಥ ಸಂದಾಯವನ್ನು ಯಾವ ದಿನಾಂಕದಂದು ಮಾಡಬೇಕಾಗಿತ್ತೋ ಆ ದಿನಾಂಕದಿಂದ ಅಂಥ ಮೊಬಲಗನ್ನು ವಾಸ್ತವವಾಗಿ ಸಂದಾಯ ಮಾಡುವವರೆಗಿನ ಅವಧಿಯಲ್ಲಿ ಪ್ರತಿ ತಿಂಗಳಿಗೆ ಅಥವಾ ಆ ತಿಂಗಳಿನ ಭಾಗಕ್ಕೆ ಶೇಕಡ ಎರಡರ ದರದಲ್ಲಿ ಆ ಮೊಬಲಗಿನ ಮೇಲೆ ಬಡ್ಡಿಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

9. **ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಉಪಕರವನ್ನು ಸಂದಾಯ ಮಾಡದೆ ಇರುವುದಕ್ಕಾಗಿ ದಂಡ.**– 3ನೇ ಪ್ರಕರಣದ ಮೇರೆಗೆ ಯಾರೇ ನಿಯೋಜಕನು ಸಂದಾಯ ಮಾಡಬೇಕಾದ ಉಪಕರದ ಯಾವುದೇ ಮೊಬಲಗನ್ನು, 5ನೇ ಪ್ರಕರಣದ ಮೇರೆಗೆ ಮಾಡಿದ ಕರ ನಿರ್ಧರಣಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದೊಳಗಾಗಿ ಸಂದಾಯ ಮಾಡದಿದ್ದರೆ, ಅದನ್ನು ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು ಮತ್ತು ಈ ಬಗ್ಗೆ ನಿಯಮಿಸಿದ ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸುವಂತಹ ವಿಚಾರಣೆಯನ್ನು ನಡೆಸಿದ ನಂತರ ಆ ನಿಯೋಜಕನಿಗೆ ಉಪಕರದ ಮೊಬಲಗನ್ನು ಮೀರದಂಥ ದಂಡವನ್ನು ವಿಧಿಸಬಹುದು:

ಪರಂತು, ಅಂಥ ಯಾವುದೇ ದಂಡವನ್ನು ವಿಧಿಸುವುದಕ್ಕೆ ಮುಂಚೆ ಅಂಥ ನಿಯೋಜಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು ಮತ್ತು ಅಂತಹ ಅಹವಾಲನ್ನು ಆಲಿಸಿದ ನಂತರ, ಸಮಂಜಸವಾದ ಮತ್ತು ಸಾಕಷ್ಟು ಕಾರಣದಿಂದಾಗಿ ಉಪಕರವನ್ನು ಸಂದಾಯ ಮಾಡಲಾಗಲಿಲ್ಲವೆಂದು ಸದರಿ ಪ್ರಾಧಿಕಾರಕ್ಕೆ ಮನವರಿಕೆಯಾದರೆ ಈ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

10. **ಅಧಿನಿಯಮದ ಮೇರೆಗೆ ಬಾಕಿ ಇರುವ ಮೊಬಲಗಿನ ವಸೂಲಿ.**– ಯಾರೇ ನಿಯೋಜಕನಿಂದ ಈ ಅಧಿನಿಯಮದ ಮೇರೆಗೆ ಬಾಕಿ ಇರುವ ಯಾವುದೇ ಮೊಬಲಗನ್ನು (ಯಾವುದೇ ಬಡ್ಡಿ ಅಥವಾ ದಂಡವು ಸೇರಿದಂತೆ) ಭೂಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲಿ ಮಾಡಬಹುದು.

**11. ಅಪೀಲುಗಳು.–** (1) 5ನೇ ಪ್ರಕರಣದ ಮೇರೆಗೆ ಮಾಡಿದ ಉಪಕರ ನಿರ್ಧರಣಾ ಆದೇಶದಿಂದ ಅಥವಾ 9ನೇ ಪ್ರಕರಣದ ಮೇರೆಗೆ ದಂಡ ವಿಧಿಸಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ನಿಯೋಜಕನು ನಿಯಮಿಸಬಹುದಾದಂತಹ ಕಾಲದೊಳಗೆ ನಿಯಮಿಸಬಹುದಾದಂತಹ ಅಪೀಲು ಪ್ರಾಧಿಕಾರಿಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅಪೀಲನ್ನು ಸಲ್ಲಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಪೀಲಿನ ಜೊತೆಗೆ ನಿಯಮಿಸಬಹುದಾದಂತಹ ಫೀಜು ಇರತಕ್ಕದ್ದು.

(3) ಉಪ-ಪ್ರಕರಣ (1)ರ ಮೇರೆಗೆ ಸಲ್ಲಿಸಿದ ಯಾವುದೇ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲು ಪ್ರಾಧಿಕಾರವು ಈ ವಿಷಯದಲ್ಲಿ ಅಪೀಲುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ನಂತರ ಸಾಧ್ಯವಾದಷ್ಟು ತ್ವರಿತವಾಗಿ ಅಪೀಲನ್ನು ವಿಲೆಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಅಪೀಲಿನ ಮೇಲೆ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾದುದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**12. ದಂಡ.–** (1) ಈ ಅಧಿನಿಯಮದ ಮೇರೆಗೆ ವಿವರಣ ಪಟ್ಟಿಕೆಯನ್ನು ಸಲ್ಲಿಸಲು ಹೊಣೆಗಾರನಾಗಿರುವ ಯಾರೇ ಆಗಲಿ, ಯಾವುದೇ ವಿವರ ಪಟ್ಟಿಯನ್ನು ಅದು ಸುಳ್ಳಾದುದೆಂದು ತಿಳಿದಿದ್ದೂ ಅಥವಾ ನಂಬಲೂ ಕಾರಣವಿದ್ದು ಸಲ್ಲಿಸಿದ್ದಲ್ಲಿ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂತಹ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡನೀಯನಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಉಪಕರವನ್ನು ಸಂದಾಯ ಮಾಡಲು ಬದ್ಧನಾಗಿರುವ ಯಾರೇ ಆಗಲಿ, ಅಂಥ ಉಪಕರವನ್ನು ಸಂದಾಯ ಮಾಡಲು ಬುದ್ಧಿಪೂರ್ವಕವಾಗಿ ಅಥವಾ ಉದ್ದೇಶ ಪೂರ್ವಕವಾಗಿ ತಪ್ಪಿಸಿಕೊಂಡರೆ, ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

(3) ಕೇಂದ್ರ ಸರ್ಕಾರವು ಅಥವಾ ಅದರ ಅಧಿಕಾರದ ಮೇರೆಗೆ ನೀಡಿದ ದೂರಿನ ಮೇಲೆ ಹೊರತು, ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧ ಸಂಜ್ಞಾನವನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

**13. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಆ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಹಾಗೂ ಕಂಪನಿಯನ್ನು ಸಹ ಆ ಅಪರಾಧದ ತಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆಯೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಯುಕ್ತ ಎಚ್ಚರಿಕೆಯನ್ನು ವಹಿಸಿದ್ದೇನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.**–ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ, ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**14. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಉಪಕರವನ್ನು ಯಾವ ರೀತಿಯಲ್ಲಿ ಮತ್ತು ಯಾವ ಕಾಲದೊಳಗೆ ಸಂಗ್ರಹಿಸಬೇಕೋ ಆ ರೀತಿ ಮತ್ತು ಆ ಕಾಲ;

(ಬಿ) 3ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ವಿಧಿಸಬಹುದಾದ, ಮುಂಚಿತವಾಗಿಯೇ ವಿಧಿಸಬಹುದಾದ ಉಪಕರದ ದರ ಅಥವಾ ದರಗಳು;

(ಸಿ) 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಬೇಕಾದ ವಿವರಣ ಪಟ್ಟಿಕೆಗಳ ವಿವರಗಳು ಅವುಗಳನ್ನು ಯಾವ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಸಲ್ಲಿಸಬೇಕೋ ಆ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ಅಂಥ ವಿವರಣ ಪಟ್ಟಿಕೆಗಳನ್ನು ಸಲ್ಲಿಸಬೇಕಾದ ರೀತಿ ಮತ್ತು ಕಾಲ;

(ಡಿ) 7ನೇ ಪ್ರಕರಣದ ಮೇರೆಗೆ ಅಧಿಕಾರಿಯು ಅಥವಾ ಪ್ರಾಧಿಕಾರವು ಯಾವ ಅಧಿಕಾರಗಳನ್ನು ಚಲಾಯಿಸಬಹುದೋ ಆ ಅಧಿಕಾರಗಳು;

(ಇ) 9ನೇ ಪ್ರಕರಣದ ಮೇರೆಗೆ ಯಾವ ಪ್ರಾಧಿಕಾರವು ದಂಡನೆಯನ್ನು ವಿಧಿಸಬಹುದೋ ಆ ಪ್ರಾಧಿಕಾರ;

(ಎಫ್) 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅಪೀಲನ್ನು ಯಾವ ಪ್ರಾಧಿಕಾರಕ್ಕೆ ಸಲ್ಲಿಸಬಹುದೋ ಆ ಪ್ರಾಧಿಕಾರ ಮತ್ತು ಅಂಥ ಅಪೀಲನ್ನು ಯಾವ ಕಾಲದೊಳಗೆ ಮತ್ತು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬಹುದೋ ಆ ಕಾಲ, ಆ ನಮೂನೆ ಮತ್ತು ಆ ರೀತಿ;

(ಜಿ) 11ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅಪೀಲಿನ ಜೊತೆಗೆ ಇರಬೇಕಾದ ಫೀಜು;

(ಹೆಚ್) ಯಾವ ವಿಷಯವನ್ನು ನಿಯಮಿಸಬೇಕೋ ಅಥವಾ ನಿಯಮಿಸಬಹುದೋ ಆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**15. ನಿರಸನ ಮತ್ತು ಉಳಿಸುವಿಕೆ.-** (1) ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಉಪಕರ ಮೂರನೇ ಅಧ್ಯಾದೇಶ 1996 (1996ರ ಅಧ್ಯಾದೇಶ 26) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

* * * * *